# ಹೂ ನವಿಲು

ಚಿತ್ರ ನೋಡಿದಾಕ್ಷಣ ಬೃಹತ್ ಸಮಾರಂಭವೊಂದಕ್ಕೆ ಅದ್ದೂರಿಯ ಸಿದ್ಧತೆ ನಡೆದಿದೆ ಅಥವಾ ನೈಜ ಹೂವುಗಳಂತೆ ಹೋಲುವ ಈ ಕೃತಕ ಹೂವುಗಳು ಯಾವುದೋ ಒಂದು ಕಾರ್ಯಕ್ರಮಕ್ಕೆ ಸ್ವಾಗತ ಕೋರುತ್ತಿವೆ ಎಂದುಕೊಂಡಿರಾ...?

ಹಾಗೆಂದುಕೊಂಡಿದ್ದರೆ ನಿಮ್ಮ ಊಹೆ ತಪ್ಪು. ಏಕೆಂದರೆ ಇಲ್ಲಿ ಯಾವ ಸಮಾರಂಭವೂ ಇಲ್ಲ, ಇವು ಕೃತಕ ಹೂವುಗಳೂ ಅಲ್ಲ!

ಕಲಾವಿದನ ಕುಂಚದಿಂದ ಮೂಡಿಬಂದಂತೆ ಕಾಣುತ್ತಿರುವ ಇವು ನೈಸರ್ಗಿಕ ಹೂವಿನ ರಾಶಿಗಳು. 72 ಸಾವಿರ ಚದರ ಮೀಟರ್ (ನಾಲ್ಕು ಕಿಲೋ ಮೀಟರ್‌ಗೂ ಅಧಿಕ) ಅಳತೆಯ ಬೃಹದಾಕಾರದ ಅಂಗಳದಲ್ಲಿ ಇರುವ ಈ ಪುಷ್ಪಗಳ ಸಂಖ್ಯೆ ನಾಲ್ಕೂವರೆ ಕೋಟಿಗೂ ಹೆಚ್ಚು!

ಈ ಹೂ ತೋಟ ಇರುವುದು ದುಬೈನ ಲ್ಯಾಂಡ್ ಅರೇಬಿಯನ್ ರಾಂಚಸ್ ಸಮೀಪ. ಇದರ ಹೆಸರು 'ದುಬೈ ಮಿರಾಕಲ್ ಗಾರ್ಡನ್'. ಕಳೆದ ವರ್ಷ ಫೆಬ್ರುವರಿ 14 ಅಂದರೆ ಪ್ರೇಮಿಗಳ ದಿನದಂದು ಇದು ಉದ್ಘಾಟನೆಗೊಂಡಿದೆ. ಜಗತ್ತಿನ ಅದ್ಭುತ ಹೂದೋಟದ ಪಟ್ಟಿಯಲ್ಲಿ ಇದಕ್ಕೀಗ ಪ್ರಥಮ ಸ್ಥಾನ. ಗೋಡೆಯ ಮೇಲೆ ಇಳಿಬಿಟ್ಟಿರುವ 'ಫ್ಲವರ್ ವಾಲ್'ಗೆ ಗಿನ್ನೆಸ್ ದಾಖಲೆಯ ಗರಿ.

ನವಿಲನ್ನು ಹೋಲುವ ಹೂವು ವಿನ್ಯಾಸ ಅಂತೂ ಅದ್ಭುತ. ಈ ಹೂ ತೋಟವನ್ನು ಬೆಳೆಸಲು ಎಷ್ಟು ನೀರು ಬೇಕಾಗಬಹುದು ಎಂದು ನೀವು ಯೋಚಿಸಬಹುದು. ಅಚ್ಚರಿ ಎಂದರೆ ಇದಕ್ಕೆ ಬಳಸುವುದು ಕೊಳಚೆ ನೀರು! ಕೊಳಚೆ ನೀರನ್ನು ಸಂಸ್ಕರಿಸಿ ಹನಿ ನೀರಾವರಿ ಮೂಲಕ ಈ ತೋಟಕ್ಕೆ ಬಿಡಲಾಗುತ್ತದೆ.

■ ಸುಚೇತನಾ





